
## ನನ್ನ ಓದು




**ನನ್ನೊಳಗಿನ ಮಲೆನಾಡು**

ಪ್ರಧಾನ ಸಂಪಾದಕರು: ಸೌಮ್ಯ ಅರುಣಕುಮಾರ್ (ಅರುಣ ಕೆ.ಆರ್.)
ಪು: 538
ಬೆಲೆ: ನಮೂದಿಸಿಲ್ಲ
ಪ್ರ: ಕೊಳವಳ್ಳಿ ಪ್ರಕಾಶನ, ಪದ್ಮನಾಭ ನಗರ, ಬೆಂಗಳೂರು

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.

ನರೇಂದ್ರ ಪೈ

# ನಿಮ್ಮೊಳಗಿನ ನಿಮ್ಮೂರು...

ನಮ್ಮೆಲ್ಲರೊಳಗೂ ಒಂದು ಊರು ಇರುತ್ತದೆ. ಅದು ನಮ್ಮ ಬಾಲ್ಯದೊಂದಿಗೆ ನಂಟು ಬೆಸೆದುಕೊಂಡಿರುತ್ತದೆ. ಬೆಳೆದ ಮೇಲೆ ಆ ಊರು ಬಿಟ್ಟು ಬೇರೆಡೆ ಹೋಗುತ್ತೇವೋ ಅಲ್ಲಿಯೇ ತಳವೂರುತ್ತೇವೋ ಅದು ಬೇರೆ ಪ್ರಶ್ನೆ. ಆದರೆ ನಮ್ಮೊಳಗಿರುವ ಊರು ಮಾತ್ರ ವಿಶಿಷ್ಟವಾಗಿಯೇ ಉಳಿದಿರುತ್ತದೆ. ಅದರ ಕಾಲ್ದಾರಿಗಳು, ಹೆದ್ದಾರಿಗಳು, ಆಟವಾಡುತ್ತಿದ್ದ ತಾಣಗಳು, ಶಾಲೆ, ಆ ಶಾಲೆಯ ಬಾವಿ, ಮೇಸ್ಟ್ರುಗಳು, ದೇವಸ್ಥಾನ, ಕಾರ್ತಿಕ ಮಾಸದ ಪೂಜೆ, ಭಜನೆ, ಜಾತ್ರೆ, ಯುವಕ ಸಂಘದ ನಾಟಕೋತ್ಸವ, ಆಗ ತಿಂದ ತಿಂಡಿ, ಹಣ್ಣುಗಳು, ಆ ದಿನಗಳ ಗೆಳೆಯರು, ಇಷ್ಟವಾಗಿದ್ದ ಯಾವುದೋ ಮರ ಅಥವಾ ದಿಬ್ಬ ಹೀಗೆ ಅದರ ನೆನಪುಗಳು ಕಟ್ಟಿಕೊಡುವ ಊರು ಹೊರಗೆ ಕಣ್ಣಿಗೆ ಕಾಣುವ ಊರಿಗಿಂತ ತೀರ ಭಿನ್ನವಾಗಿರುತ್ತದೆ. ಹೊರಗಿನ ಊರು ಬೆಳೆಯುತ್ತದೆ, ಬದಲಾಗುತ್ತದೆ. ಆದರೆ ನಮ್ಮೊಳಗಿನ ಊರು ಹಾಗೆಯೇ ಚಿರಂತನ ಸ್ಮೃತಿಯಾಗಿ ಬೆಚ್ಚಗೇ ಉಳಿದು ಬಿಡುತ್ತದೆ. ಯಶವಂತ ಚಿತ್ತಾಲರ ಹನೇಹಳ್ಳಿಯಂತೆ, ಆರ್.ಕೆ. ನಾರಾಯಣರ ಮಾಲ್ಗುಡಿಯಂತೆ, ವ್ಯಾಸರ ಶಂಕರೀ ನದಿ ಪಕ್ಕದ ದುರ್ಗಾಪುರದಂತೆ, ನಾ. ಮೊಗಸಾಲೆಯವರ ಸೀತಾಪುರದಂತೆ ನಮ್ಮೊಳಗೂ ಒಂದು ನಮ್ಮದೇ ಆದ ಊರು ಅದರದೇ ಆದ ರೂಪುರೇಷೆಗಳೊಂದಿಗೆ ಅತ್ಯಂತ ಕರಾರುವಾಕ್ಕಾದ ಚಿತ್ರವನ್ನು ಬೆಚ್ಚಗೆ ಕಾಪಿಟ್ಟುಕೊಂಡಿರುತ್ತದೆ ಎನ್ನುವುದು ನಿತ್ಯಸತ್ಯ. ಆದರೆ ಎಂದಾದರೂ ಅದನ್ನು ಮತ್ತೊಮ್ಮೆ ಸ್ಪರ್ಶಿಸಲು ಪ್ರಯತ್ನಿಸಿದ್ದೀರಾ?

ನೀವು ಕತೆಗಾರರೋ, ಸಾಹಿತಿಯೋ ಆಗಿದ್ದರೆ ಅದನ್ನು ಮಾಡಿರುತ್ತೀರಿ. ಅಸಾಹಿತ್ಯಿಕ ವಲಯದಿಂದ ಬಂದವರು ಅದನ್ನು ಮಾಡಲಾರರೆ? ಖಂಡಿತ ಮಾಡಬಲ್ಲರು, ಬಹುಶಃ ಯಾವ ಒಳ ಉದ್ದೇಶಗಳೂ ಇಲ್ಲದ ಮನಸ್ಸಿನಿಂದ ಹೊರಟ ಇಂಥವರು ಹೆಚ್ಚು ಚೆನ್ನಾಗಿ, ಪ್ರಾಮಾಣಿಕವಾಗಿ ಮತ್ತು